# ಸರ್ಕಾರಿ ಪ್ರೌಢಶಾಲೆ ಬೇಗೂರು ,ಬೆಂಗಳೂರು -೬೮

## ರೂಪಣಾತ್ಮಕ ಮೌಲ್ಯಮಾಪನ ಸಾಧನಾ ಪರೀಕ್ಷೆ ೪

ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ

ಗರಿಷ್ಠ ಅಂಕ: ೨೦ ಅವಧಿ ೧ ಗಂಟೆಗಳು

ಭಾಗ -'ಎ'

ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೧೬ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ ೩*೧= ೩

೧. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

೨. ಗಡಿಯ ಆಚೆ ಈಚೆ ಹರಿದಿದ್ದು ಏನು ?

೩. ಒಗಟುಗಳಿಂದ ವಿದ್ಯಾರ್ಥಿಗಳಾದ ನೀವು ಹೇಗೆ ಪ್ರಯೋಜನ ಪಡೆಯುವಿರಿ ?

ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೨=೪

೪. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನುವಿವರಿಸಿ.

೫. ಸಂಕಟಕೆ ಗಡಿ ಇಲ್ಲ ಏಕೆ ?

ಈ ಕೆಳಗಿನ ಹೇಳಿಕೆಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೧*೩=೩

೬. ಸ್ವಧರ್ಮೇ ನಿಧನಂ ಶ್ರೇಯಃ

೭ . ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೨*೧=೨

ಉರ್ವಿಯೊಳ್ ಕೌಸಲ್ಯೆ ಪಡೆದ ರಾಮ|
ನೋರ್ವನೇ ವೀರನಾತನ ಯಜ್ಞತುರಗಮಿದು|
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ||
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ|
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ |
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ||

ಪ್ರಶ್ನೆಗಳು :

೧. ಲವನು ಉರಿದೇಳಲು ಕಾರಣವೇನು ?

mamatabhagwat1@gmail.com

೨. ಲವನ ನಡುವಳಿಕೆ ಇಷ್ಟವಾಯಿತೇ ?ಏಕೆ?

೮. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು .ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧*೪=೪

ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ವಿವರಿಸಿ .

ಅಥವಾ

ವೃಕ್ಷಸಾಕ್ಷಿ ಗದ್ಯಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ?ಏಕೆ ?

## ಭಾಗ – 'ಬಿ'

## ಛಂದಸ್ಸು -೨ಅಂಕಗಳು

೯. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ,ಛಂದಸ್ಸಿನ ಹೆಸರು ಬರೆಯಿರಿ.

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ |
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ |
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ||

ಅಥವಾ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ |
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ |
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂಬಿಡು ಬಡಿವರೆಮ್ಮನೆನಲು ||

## ಭಾಗ -'ಸಿ'

## ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ (೨ ಅಂಕಗಳು)

೧೦. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ . ೧*೨=

* ದುಡಿಮೆಯೇ ದುಡ್ಡಿನ ತಾಯಿ .
* ದೇಶ ಸುತ್ತಿ ನೋಡು ; ಕೋಶ ಓದಿ ನೋಡು

mamatabhagwat1@gmail.com